## -: ವಾರ್ಡ್ ಸಮಿತಿ ಸಭೆ :-

## ದಿನಾಂಕ: 05.03.2022

ವಿಷಯ: ವಾರ್ಡ್ ಸಂಖ್ಯೆ 68 ಮಹಾಲಕ್ಷ್ಮೀಪುರದಲ್ಲಿ ವಾರ್ಡ್ ಸಮಿತಿ ಸಭೆಯನ್ನು ಏರ್ಪಡಿಸಿರುವ ಬಗ್ಗೆ.
ಉಲ್ಲೇಖ: ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶ ಪತ್ರ ಸಂಖ್ಯೆ: ಬಿ12(5)/ಪಿ.ಆರ್/35/ 2020-21 ದಿನಾಂಕ: 21.09.2020

ದಿನಾಂಕ 05.03.2022 ರಂದು ಸಮಯ ಬೆಳಿಗ್ಗೆ 11.30 ಗಂಟೆಗೆ ವಾರ್ಡ್ ಸಂಖ್ಯೆ 68 ಮಹಾಲಕ್ಷ್ಮೀಪುರ ವಾರ್ಡ್ ಕಛೇರಿಯಲ್ಲಿ ವಾರ್ಡ್ ಸಮಿತಿ ಸಭೆಯನ್ನು ಮಾನ್ಯ ವಾರ್ಡ್ ಕಮಿಟಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ರಾಜೇಂದ್ರನಾಯಕ್, (ಅಧ್ಯಕ್ಷರು) ನೋಡಲ್ ಅಧಿಕಾರಿಗಳು
2. ಶ್ರೀ ವಿ.ಆರ್. ಕೃಷ್ಣಪ್ಪ ಸಹಾಯಕ ಅಭಿಯಂತರರು, ಹಾಗೂ ಕಾರ್ಯದರ್ಶಿ
3. ಅರುಣ್ ಕುಮಾರ್ ಹೆಚ್.ಆರ್. ಮೌಲ್ಯಮಾಪಕರು (ಕಂದಾಯ)
4. ಶ್ರೀಮತಿ ಗೀತಾ ಕೆ. ಕಿರಿಯ ಆರೋಗ್ಯ ಪರಿವೀಕ್ಷಕರು
5. ಸಹಾಯಕ ಇಂಜಿನಿಯರ್ ಬೆಸ್ಕಾಂ

ಶ್ರೀ ವಿ.ಆರ್. ಕೃಷ್ಣಪ್ಪ, ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು ರವರು ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಲಾಯಿತು. ಸಭೆಯಲ್ಲಿ ಈ ಕೆಳಕಂಡ ಅಂಶಗಳನ್ನು ಚರ್ಚಿಸಲಾಯಿತು.

1. ಪೈಪ್‌ಲೈನ್ ರಸ್ತೆಯಲ್ಲಿ ರಾತ್ರಿ ವೇಳೆ ಡೆಬ್ರಿಸ್ ಸುರಿಯುತ್ತಿದ್ದು, ಇದನ್ನು ಹಿಂದಿನ ಸಭೆಯಲ್ಲಿ ಸೂಚಿಸಿದಂತೆ ಸಾಮೂಹಿಕ ಸ್ವಚ್ಚತಾ ಕಾರ್ಯಕ್ರಮ ಅವಳಡಿಸಿಕೊಂಡು ತೆರವುಗೊಳಿಸಲಾಗಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು.
2. ರಾತ್ರಿ ವೇಳೆ ಡೆಬ್ರಿಸ್ ಮತ್ತು ಕಸದ ರಾಶಿಯನ್ನು ಅನಧಿಕೃತವಾಗಿ ಸುರಿಯುತ್ತಿರುವ ಬಗ್ಗೆ ರಾತ್ರಿ ಪಾಳಿಯಲ್ಲಿ ಕೆಲಸ ನಿರ್ವಹಿಸಿ ಅಂತಹವರಿಗೆ ದಂಡ ವಿಧಿಸಲು ಮಾರ್ಷಲ್‌ಗಳಿಗೆ ಸೂಚಿಸಲಾಗಿದೆ.
3. ವಾರ್ಡ್‌ನ ಕೆಲವು ಕಡೆ ಬ್ಲಾಕ್ ಸ್ಪಾಟ್‌ಗಳಲ್ಲಿ ಹಾಗೂ 60 ಅಡಿ ರಸ್ತೆ, ರಂಗಮಂದಿರದ ಆವರಣದಲ್ಲಿ ಇರುವ ಘನತ್ಯಾಜ್ಯವನ್ನು ತೆರವುಗೊಳಿಸಲು ಕಿರಿಯ ಆರೋಗ್ಯ ಪರಿವೀಕ್ಷಕರುಗಳಿಗೆ ಸೂಚಿಸಲಾಯಿತು.

ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಎಲ್ಲಾ ಇಲಾಖೆಗಳು ಪರಸ್ಪರ ಚರ್ಚಿಸಿ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕು ಎಂದು ಸೂಚಿಸಿದರು.

**ಸಹಾಯಕ ಅಭಿಯಂತರರು**
**ಮತ್ತು ಕಾರ್ಯದರ್ಶಿಗಳು,**
**ವಾರ್ಡ್ ನಂ. 68 ಮಹಾಲಕ್ಷ್ಮೀಪುರ**

**ಅಧ್ಯಕ್ಷರು**
**ವಾರ್ಡ್ ಕಮಿಟಿ, ವಾರ್ಡ್ ಸಂಖ್ಯೆ 68,**
**ಮಹಾಲಕ್ಷ್ಮೀಪುರ**

**ವಾರ್ಡ್ ಸಂಖ್ಯೆ 68 ರ ವಾರ್ಡ್ ಕಮಿಟಿ ಸದಸ್ಯರುಗಳು**

1. ಶ್ರೀ ರಾಜೇಂದ್ರನಾಯಕ್, (ಅಧ್ಯಕ್ಷರು) ನೋಡಲ್ ಅಧಿಕಾರಿಗಳು
2. ಶ್ರೀ ವಿ.ಆರ್. ಕೃಷ್ಣಪ್ಪ ಸಹಾಯಕ ಅಭಿಯಂತರರು, ಹಾಗೂ ಕಾರ್ಯದರ್ಶಿ
3. ಅರುಣ್ ಕುಮಾರ್ ಹೆಚ್.ಆರ್. ಮೌಲ್ಯಮಾಪಕರು (ಕಂದಾಯ)
4. ಶ್ರೀಮತಿ ಗೀತಾ ಕೆ. ಕಿರಿಯ ಆರೋಗ್ಯ ಪರಿವೀಕ್ಷಕರು
5. ಶ್ರೀ ರಮೇಶ್, ಸಹಾಯಕ ಇಂಜಿನಿಯರ್ (ಬೆಸ್ಕಾಂ)
6. ಶ್ರೀ ಹರೀಶ್ ನಾಯಕ್, ಸಹಾಯಕ ಇಂಜಿನಿಯರ್ (ಬಿ.ಡಬ್ಲೂ.ಎಸ್.ಎಸ್.ಬಿ)